Reg No ಬಿ G 155 7 — 5 — 72

55th Year of Publication ‡ 'Satyavadi' Daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪರಮೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಏರಸ್ತೆದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರೂಪಾಯಿ ಬೆಲೆಯನ್ನು ಇಳಿಸಲಾಗುವುದಿಲ್ಲ

ಚಲನಚಿತ್ರಪ್ರಪಂಚದಲ್ಲಿ ಧಾಳಿ

ಬೆಂಗಳೂರು - ಕಳೆದ ಮೂರು ದಿನಗಳಿಂದ ಆದಾಯ ತೆರಿಗೆ ಅಧಿಕಾರಿಗಳು ಚಲನಚಿತ್ರ ಪ್ರಪಂಚದಲ್ಲಿ ನಡೆಸಿದ ಧಾಳಿಗಳಿಂದ ಅನೇಕ ಲಕ್ಷರೂಗಳ ಬೆಲೆಯ ಅನಿರೀಕ್ಷಿತ ಬಹು ಹೆಚ್ಚು ಪ್ರಮಾಣದ ವಜ್ರಗಳೂ, ಚಿನ್ನಾಭರಣಗಳನ್ನೂ ವಶಪಡಿಸಿಕೊಂಡಿದೆ

★

ಆಹಾರ ಪರಿಸ್ಥಿತಿ

ಮಂಗಳೂರು— ರಾಜ್ಯದ ಆಹಾರ ಪರಿಸ್ಥಿತಿ ತೃಪ್ತಿಕರವಾಗಿದೆಯೆಂದು ಆಹಾರ ಸ್ಟೇಟ್ ಮಂತ್ರಿ ಶ್ರೀಮತಿ ಈವಾ ವಾಸ್ ಪತ್ರಿಕೆಯವರಿಗೆ ತಿಳಿಸಿದರು.

●

ಪ್ರವಾಸಿಕರು

ಭಾರತ ಸಂಬಂಧದ ಈಚಿನ ಅಮೇರಿಕಾದ ಕೈಪಿಡಿಗಳಲ್ಲಿ, ಮಾಜಿ ಪೋರ್ಚುಗೀಸು ಸ್ವಾಧೀನವಾಗಿದ್ದು ಈಗ ಭಾರತದೊಡನೆ ಸೇರ್ಪಡೆಯಾಗಿರುವ ಗೋವಾದಲ್ಲಿ ಮದ್ಯಪಡೆಯುವುದು ಹೆಚ್ಚು ಕಡಮೆ ಸಾಧ್ಯವಾಗಿರುವುದೆಂದೂ, ಮತ್ತು ಇದಕ್ಕೂ ಕಡೆಯದಾಗಿ, ವೇಶ್ಯೆಯರು ಬೀದಿಗಳಿಂದ ಮಾಯವಾಗಿದ್ದಾರೆಂದೂ ವ್ಯಸನಪೂರಿತವಾಗಿ ತಿಳಿಸಿದೆ

§ ವೇಲ್ಸಿಂಡ ವಿಷಯವನ್ನು ಅಮೇರಿಕಾ ಕೈಪಿಡಿ ಪುಸ್ತಕದಿಂದ "ರ್ಯಾಷನಲಿಸ್ಟ್" ಪ್ರಕಟಿಸಿದೆ : ಇದು ಭಾರತಕ್ಕೆ ಒಂದು ಅನಿರೀಕ್ಷಿತ ಪ್ರಶಂಸೆ ಮತ್ತು ಗೋವಾದಲ್ಲಿನ ಪೋರ್ಚುಗೀಸ ಆಡಳಿತಕ್ಕೆ ವಿರುದ್ಧವಾಗಿದೆ ; ಪ್ರವಾಸಿಕರು ವೇಶ್ಯೆಯರಿಗೆ ಪ್ರಯೋಜನಕಾರಿಯಾದದ್ದೂ ದೇಶದ ನೀತಿಗೆ ಅದು ಕೆಡುಕಾದುದೆಂದು ಪ್ರದರ್ಶಿಸುತ್ತದೆ : ಪ್ರವಾಸಿಕರಿಂದ ಐಶ್ವರ್ಯ ಹೊಂದಿ ಆನೀತಿಯನ್ನು ಅಭಿವೃದ್ಧಿಸಿದುವುದಕ್ಕಿಂತಲೂ ಪ್ರವಾಸಿಕರಿಲ್ಲದೆ ಬಡವಾಗಿದ್ದು ನೀತಿವಂತವಾಗಿರುವುದು ಉತ್ತಮ (ಟ್ರೂತ್)

ಕನ್ನಡ ಭಾಷೆಯ ಮಹತ್ವ

★

ಪ್ರಪಂಚದಲ್ಲಿ ಸುಮಾರು 3000 ಕ್ಕೂ ಹೆಚ್ಚು ಭಾಷೆಗಳಿವೆ ; ಭಾರತದಲ್ಲಿ ಸುಮಾರು 750 ಭಾಷೆಗಳಿವೆ ; ಈ ಭಾಷೆಗಳಲ್ಲಿ ಕನ್ನಡ ಮೊದಲಾದ 14 ರಾಷ್ಟ್ರಭಾಷೆಗಳಿವೆ ; ಕನ್ನಡವನ್ನು ಮಾತಾಡುವವರ ಸಂಖ್ಯೆ ಸುಮಾರು ಎರಡು ಕೋಟಿಗೂ ಹೆಚ್ಚಿದೆ ; ಉತ್ತರದ ಭಾಷೆಗಳು ಸಂಸ್ಕೃತ ಜನ್ಯವಾಗಿಯೂ, ದಕ್ಷಿಣ ಭಾಷೆಗಳು ದ್ರಾವಿಡ ಜನ್ಯವಾಗಿಯೂ ಇವೆ ; ಕನ್ನಡವು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದುದು : ಇತರ ಭಾರತೀಯ ಲಿಪಿಗಳಂತೆ ಕನ್ನಡವು ಬ್ರಾಹ್ಮೀ ಲಿಪಿಯಿಂದ ಜನಿಸಿದುದು ; ಕರ್ನಾಟಕದಲ್ಲಿ ಬಳಕೆಯಲ್ಲಿರುವ ಕೊಡಗ, ಬಡಗ, ತೋದ, ತುಳು ಭಾಷೆಗಳು ಒಂದು ರೀತಿಯಿಂದ ಕನ್ನಡ ಭಾಷೆಗಳೆಂದು ಕರೆಯುವಂತಿದೆ ; ಇವಕ್ಕೆ ಸ್ವಂತ ಲಿಪಿಯಿಲ್ಲ.

ಮಹಿಳಾ ರಫ್ತು ಅಧಿಕಾರಿಗಳು

ಅಂತರರಾಷ್ಟ್ರೀಯ ರಫ್ತು ಸಂಸ್ಥೆಗೆ, ವಿದೇಶಗಳಲ್ಲಿ ಪ್ರವಾಸಮಾಡಿ ಮತ್ತು ವಿದೇಶೀ ರಾಯಭಾರಿ ಕಛೇರಿಗಳು / ನಿಯೋಗಗಳು, ಹಿರಿಯ ಸರ್ಕಾರಿ ಅಧಿಕಾರಿಗಳು ಮೊದಲಾದವರೊಡನೆ ಒಡಂಬಡಿಕೆ ಮಾಡಿ, ವಿದೇಶೀ ಮಾರುಕಟ್ಟೆಗಳಲ್ಲಿ ರಫ್ತುಗಳನ್ನು ಪ್ರವರ್ಧಿಸಲು ಉತ್ಸಾಹಿ ಮಹಿಳಾ ರಫ್ತು ಅಧಿಕಾರಿಗಳು ಬೇಕಾಗಿದ್ದಾರೆ. ಧಾರಾಳವಾದ ಸಂಬಳ, ವಾರ್ಷಿಕ ಬೋನಸ್ ಮತ್ತು ಒಳ್ಳೇ ಭವಿಷ್ಯ ದೊರೆಯುವುದು. ಒಳ್ಳೇ ವ್ಯಕ್ತಿತ್ವ, ಸನ್ನೋಡವಳಿಕೆ, ಸುತ್ತಾಡಲು ಅಸಾಂಪ್ರತ ಮತ್ತು ಸ್ವಾತುತ್ಸೈ ಹೊಂದಿರುವ ಮತ್ತು ಯಾವ ಅಧೀನತ್ವವೂ ಇಲ್ಲದ, ಉಪಕ್ರಮಿಸುವ ಮತ್ತು ಮುನ್ನುಗಿಸುವ ಶಕ್ತಿ ಹೊಂದಿದ ಚುರುಕು ಬುದ್ಧಿಯ ಮಹಿಳೆಯರು, ಒಂದು ವಾರದೊಳಗೆ, ಎಲ್ಲ ವಿವರಗಳೊಡನೆ, ಇತ್ತೀಚಿನ ಫೋಟೋ ಸಹಿತವಾಗಿ "ಮ್ಯಾನೇಜಿಂಗ್ ಡೈರೆಕ್ಟರ್, ಪೋಸ್ಟ್ ಆಫೀಸ್ ಬಾಕ್ಸ್ 738, ನವದೆಲ್ಲಿ" ಇವರಿಗೆ ದಯವಿಟ್ಟು ಬರೆದುಕೊಳ್ಳುವುದು

Managing Director, P. O Box 738, New Delhi

108 ವರ್ಷದ ಗಂಡ 19 ವರ್ಷದ ಸೆಂಡತಿ

ಕೌಲಾಲುಂಪೂರ್— ಈಚಿನ ಎರಡೂವರೆ ವರ್ಷಗಳವರೆಗೆ ಬ್ರಹ್ಮಚಾರಿಯಾಗಿಯಾಗಿದ್ದ 108 ವಯಸ್ಸಿನ ಮಲೇಷಿಯದ ಹಷ್ಣಾ ಬಿನ್ ಪಂಗಾಲು ಯುಸೂಫ್ ಮತ್ತು ಆತನ 19 ವರ್ಷದ ಪತ್ನಿಗೆ ಈಗ 8 ತಿಂಗಳು ತೂಕದ ಮಗು ಹುಟ್ಟಿದೆ.

●

ಸೈಕಲ್ ಮೇಲೆ ವಿಶ್ವಪರ್ಯಟಣ

ಬೆಂಗಳೂರು— ಕೆಥಿಡ್ರಲ್ ಯುನಕ ಕೇಂದ್ರದ ಶ್ರೀ ಚಿಕ್ಕಣ್ಣನವರು ಸೈಕಲ್ ಮೇಲೆ ವಿಶ್ವ ಪರ್ಯಟನೆಗೆ ತಾ ॥ ರಂದು ಹೊರಡುವರು.

●

ನ್ಯೂಯಾರ್ಕ್— ಭಾರತದಲ್ಲಿ ಮಕ್ಕಳ ಜಾಗರೂಕತೆ ಸ್ಕೀಂಗೆ ವಿಶ್ವಸಂಸ್ಥೆ ಮಕ್ಕಳ ನಿಧಿಯು ರೂ. 2.15 ಕೋಟಿ ಮಂಜೂರ್ಮಾಡಿದೆ.

ವಿದ್ಯಾರ್ಥಿಗಳ ನಿರ್ಧಾರ

ಬೆಂಗಳೂರು— ಇಲ್ಲಿಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಮಿತಿಯವರು, ಪರೀಕ್ಷೆಗಳಾದ ನಂತರ, ಕೇಂದ್ರದ ಬೆಳಗಾವನ್ನು ವಿಭಜಿಸುವ ಯೋಚನೆಯನ್ನು ಪ್ರತಿಭಟಿಸಿ ಮೆರವಣಿಗೆ ನಡೆಸಲು ನಿರ್ಧರಿಸಿದ್ದಾರೆ

★

ಅನೆಗಳ ಸಾವು

ಡನಡ್ಡ (ಘಾರವಾಲ್)— ಜಿಂಕೋರಬಾಟ್ ರಾಷ್ಟ್ರೀಯ ಪಾರ್ಕಿನಲ್ಲಿ ಒಂದು ಸಲಗ ಹಾಗೂ ಒಂದು ಹೆಣ್ಣಾನೆ 1100 ವಿದ್ಯುತ್ಶಕ್ತಿಯ ಟ್ರಾನ್ಸ್‌ಮಿಷ್ಕಂಭವನ್ನು ಕೆತ್ತಿ ಹಾಕಿದಾಗ ವಿದ್ಯುತ್ ಶಕ್ತಿ ತಗುಲಿ ಮೃತಪಟ್ಟವು.

○

ಸಕ್ಕರೆ

ನವದೆಹಲಿ— ನ್ಯಾಯ ಬೆಲೆ ಅಂಗಡಿಗಳಿಗೆ ಮತ್ತು ಬಹಿರಂಗ ಮಾರುಕಟ್ಟೆಗೆ ಜೂನ್ ತಿಂಗಳಿಗೆ 325000 ಟ್ ಸಕ್ಕರೆ ಬಿಡುಗಡೆಗೆ ಸರ್ಕಾರ ಆಜ್ಞೆ ಮಾಡಿದೆ.

★

ರೂಪಾಯಿ

ನವದೆಹಲಿ— ರೂಪಾಯಿಯನ್ನು ಮತ್ತೂ ಅಪಮೌಲ್ಯ ಮಾಡಲು ಸರ್ಕಾರ ಯೋಜಿಸಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

○

ವಿಶ್ವದ ನಾಶ

ಮಾಂಟ್ರೀಲ್— ಜನಸಂಖ್ಯೆ ಮತ್ತು ಅಪವಿತ್ರಗೊಳಿಸುವಿಕೆ ಹತೋಟಿಗೆ ತಪ್ಪಲ್ಪಡುದ್ದರೆ, ವಿಶ್ವವು 30 ವರ್ಷಗಳಲ್ಲಿ ಕ್ಷಯಿಸುವುದೆಂದು ಡಾ ॥ ರಾಬರ್ಟ್ ಗುಡ್‌ಆಲ್ಯಾಂಡ್ ಹೇಳಿದರು - ಯಾವ ದಂಪತಿಗಳೂ 2 ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಬಾರದು ಹಕ್ಕಿಲ್ಲವೆಂದರು

ಯದ್ಧವಿಲ್ಲದ ಒಪ್ಪಂದ

ನವದೆಹಲಿ— ಭಾರತದೊಡನೆ 'ಯುದ್ಧ ವಿಲ್ಲದ' ಸಾಂಪ್ರದಾಯಕ ಒಪ್ಪಂದದ ಮಾತಿಲ್ಲವೆಂದು ಅಧ್ಯಕ್ಷ ಭುಟ್ಟೋ ಹೇಳಿದರು – ಇದು ಕೇವಲ ನಂಬಿಕೆ ಮತ್ತು ಮಾತುಗಳನ್ನು ಲೆಕ್ಕಿಸತಕ್ಕದ್ದಲ್ಲವೆಂದಿರುವರು — ಪಾಕಿಸ್ತಾನ ಭಾರತದೊಂದಿಗೆ ಮತ್ತೊಂದು ಯುದ್ಧಕ್ಕೆ ಹೋಗುವದಿಲ್ಲವೆಂದು ತಾವು ಆಗಲೇ ತಿಳಿಸಿರುವುದಾಗಿ ಹೇಳಿದರು – ಇವು ರಾವಲ್ಪಿಂಡಿಯಲ್ಲಿ ನಡೆದುದಾಗಿ ವರದಿಯಾಗಿದೆ.

ಸುಳ್ಳು ಹೇಳುವುದು ಅಪರಾಧ

ವಾಷಿಂಗ್ಟನ್— ಅಧಿಕಾರಿಗಳು ಸುಳ್ಳು ಹೇಳುವುದು ಅಪರಾಧವೆಂದು ಮಾಡುವಂತೆ ಕಾಂಗ್ರೆಸ್ಸನ್ನು ಪುಲಿಟ್ಜರ್ ಪಾರಿತೋಷಕ ಪಡೆದ ಜಾಕ್ ಆಂಡರ್ಸನ್ ಒತ್ತಾಯ ಮಾಡಿರುವರು – ಅಮೇರಿಕಾ ಸರಕಾರ ಸತ್ಯವಂತವಾಗಿದ್ದರೆ ಕತೆಗಳು ಕುಟ್ಟುತ್ತಿರಲಿಲ್ಲವೆಂದೂ ಹೇಳಿದ್ದರು

ಜನಸಂಘದ ವಿರೋಧ

ಭಾಗಲಪುರ— ಸರಕಾರವು ವಶಪಡಿಸಿಕೊಳ್ಳುವ ಭೂಮಿಗೆ ಮಾರುಕಟ್ಟೆ ಪರಿಹಾರ ನಿಡದಿರುವ ರಾಷ್ಟ್ರಾಂಗದ 29 ನೇ ತಿದ್ದುಪಡಿಯನ್ನು ಜನಸಂಘ ವಿರೋಧಿಸುವುದೆಂದು ಅಧ್ಯಕ್ಷ ಶ್ರೀ ವಾಜಪೇಯಿಯವರು ಹೇಳಿದರು.

Contribute Liberally to the National Defence Fund

Help The Gorakshana

ಮೈಸೂರು ಪಿ. ಡಬ್ಲ್ಯು. ಡಿ.
ಚಾಮರಾಜನಗರ ವಿಭಾಗ

ಟೆಂಡರ್‌ಪ್ರಕಟಣೆ

ನಂ 5/72-73/ ತಾ॥ 22-4-72

ಕೆಳಗೆ ನಮೂದಿಸಿರುವ ಕೆಲಸಗಳಿಗೆ, 4 ನೇ ಕಲಂನಲ್ಲಿ ಕಾಣಿಸಿರುವ ಸೂಕ್ತ ತರಗತಿಯ ರಿಜಿಸ್ಟರ್‌ಗಿರುವ ಕಂಟ್ರಾಕ್ಟರುಗಳಿಂದ ನಿರಖಾದ ಫಾರಂಗಳಲ್ಲಿ ದ್ವಿಪ್ರತಿಗಳಲ್ಲಿ ಮೊಹರಾದ ಟೆಂಡರುಗಳನ್ನು ಸ್ವಾಗತಿಸಲಾಗಿದೆ; ಮತ್ತು 1972 ನೇ ಮೇ 24 ನೇ ತಾರೀಖು ಮಧ್ಯಾಹ್ನಾ 2 ಗಂಟೆ ನಂತರ ಸ್ವೀಕರಿಸಲಾಗುವುದು. ಸಾಧ್ಯವಾದರೆ ಅದೇ ತಾರೀಖು, ಹಾಜರಿರ ಬಯಸುವ ಟೆಂಡರ್‌ದಾರರು ಅಥವಾ ಅವರ ಪ್ರತಿನಿಧಿಗಳ ಎದುರು ಅವುಗಳನ್ನು ಓಡೆಯಲಾಗುವುದು. ಖಾಲಿ ಟೆಂಡರು ಫಾರಂಗಳು, ಫಾರಂಗಳ ಮಾರಾಟಕ್ಕಿಟ್ಟಿರುವ ನಿರಖಾದ ಹಣ (ವಾಪಸ್ಸಾಡಲ್ಪಡದು) ಪಾವತಿ ಮಾಡಿದಲ್ಲಿ 1972 ನೇ ಮೇ 19 ರಿಂದ 1972 ನೇ ಮೇ 23 ರವರೆಗೆ ಆಫೀಸು ವೇಳೆಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲೂ ಕೊಡಲಾಗುತ್ತೆ. ತಕ್ಕ ಅಧಿಕಾರಿಗಳು ಏನೂ ಕಾರಣ ಕೊಡದೆ ಯಾವುದಾದರೂ ಅಥವಾ ಎಲ್ಲಾ ಟೆಂಡರುಗಳನ್ನೂ ತಿರಸ್ಕರಿಸುವ ಹಕ್ಕನ್ನು ಕಾದಿಟ್ಟುಕೊಂಡಿದ್ದಾರೆ. ಹೆಚ್ಚಿಗೆ ವಿವರಗಳನ್ನು ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಆಫೀಸಿನಿಂದ ಆಫೀಸು ವೇಳೆಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲೂ ಪಡೆಯಬಹುದು.

1 ಕೆಲಸದ ಹೆಸರು–
ಕೊಳ್ಳೇಗಾಲದ ತಾಲ್ಲೂಕು ಅಜ್ಜೀಪುರದ ಹತ್ತಿರ ಉದುತೊರ್ಸ್ ಹಳ್ಳಕ್ಕೆ ಅಡ್ಡಡ್ಡಲಾಗಿ ಪಿಕ್‌ಅಪ್ ಕಟ್ಟುವುದು. (ಉಳಿಕೆ ಕೆಲಸಗಳು).

2 ಟೆಂಡರಿನ ಅಂದಾಜು ಹಣ–
3.00 ಲಕ್ಷಗಳು.

3 ಮುಂಗಡ ಹಣ ಠೇವಣಿ–
7500/–

4 ಟೆಂಡರ್ ಕೊಡಬಹುದಾದ ಕಂಟ್ರಾಕ್ಟರುಗಳ ತರಗತಿ–
II ನೆಯ ತರಗತಿ ಮತ್ತು ಅದಕ್ಕೆ ಮೇಲ್ಪಟ್ಟು

5 ಟೆಂಡರು ಫಾರಂಗಳ ಬೆಲೆ–
ರೂ. 10–30

6 ಮುಂಗಿಸಲು ಕಾಲಾವಧಿ–
12 ತಿಂಗಳುಗಳು

(ಸಹಿ) ಕೆ. ಶ್ರೀನಿವಾಸಮೂರ್ತಿ
ಎಕ್ಸಿಕ್ಯುಟಿವ್ ಇಂಜಿನಿಯರ್
ಚಾಮರಾಜನಗರ ವಿಭಾಗ

ವುಡ್‌ಲ್ಯಾಂಡ್ 5-5-72 ರಿಂದ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾಜಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರ್

ಪ್ರತಿ ದಿನ 3 ಪ್ರದರ್ಶನಗಳು

ಪ್ರತಿ ದಿನ ಬೆಳಿಗ್ಗೆ 11 ರಿಂದ 12 ಘಂಟೆವರೆಗೆ ಬಾಲ್ಕನಿ ತರಗತಿಗಳಿಗೆ ಮುಂಗಡ ಟಿಕೀಟು ಕೊಡಲಾಗುತ್ತೆ.

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಬೆಳ್ಳಿ ಮೋಡ

ಅಪೆರಾ 4 ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್ಥ್, ಕಲ್ಪನಾ

ಸಂಗೀತ: ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ: ಗೀತಪ್ರಿಯ

SHAKTI

SUDHA

A Superb Tonic

'ಮಾನವನು ಕೀಳು ಸೃಷ್ಟಿಯು ಧಣಿ, ಶ್ರೇಷ್ಠ ಸೇವ್ಯವು ಸೊಕ್ಕಿನ' ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಕ್ಕೆ ಭೂಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಅನು-ತಾಯಿ

Protect the Cow

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore 4